ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಿದ್ದು. ಆದ್ದರಿಂದ ಹೇಳುತ್ತಿದ್ದೇನೆ.

ವಿಷಯ:- ಸರ್ಕಾರಿ ಪ್ರೌಢಶಾಲೆಗಳಲ್ಲಿ ಕೊಠಡಿಗಳ ಕೊರತೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 123 (1101)

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್ ವಿಧಾನ ಸಭಾ ಕ್ಷೇತ್ರದ ತರೇದಕುಪ್ಪೆ, ಕೆಂದನಹಳ್ಳಿ ಮತ್ತು ಸಿಂಗೋನಹಳ್ಳಿ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಶಾಲಾ ಕೊಠಡಿಗಳಿಲ್ಲದೆ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಸಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಶಾಲಾ ಕೊಠಡಿಗಳಿಲ್ಲದೆ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) 1. ಸರ್ಕಾರಿ ಪ್ರೌಢಶಾಲೆ ತರೇದಕುಪ್ಪೆ:-

ಈ ಶಾಲೆಗೆ ಕಟ್ಟಡ ನಿರ್ಮಾಣ ಮಾಡಲು ನಿವೇಶನ ಲಭ್ಯವಿಲ್ಲದ ಕಾರಣ ಹಾಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿರುವ ಹೆಚ್ಚುವರಿ ಕೊಠಡಿಗಳಲ್ಲಿ ನಡೆಸಲಾಗುತ್ತದೆ.

2. ಸರ್ಕಾರಿ ಪ್ರೌಢಶಾಲೆ ಕೆಂಪನಹಳ್ಳಿ:-

1995-96ನೇ ಸಾಲಿನಲ್ಲಿ ಈ ಶಾಲೆಗೆ ಎರಡು ಕೊಠಡಿಗಳನ್ನು ನಿರ್ಮಿಸಲು ಮಂಜೂರಾಗಿದ್ದು ನಿರ್ಮಾಣ ಕಾರ್ಯಪೂರ್ಣಗೊಂಡಿದೆ.

3. ಸರ್ಕಾರಿ ಪ್ರೌಢಶಾಲೆ ಸಿಂಗೋನಹಳ್ಳಿ:-

ಈ ಶಾಲೆಗೆ ಮಂಜೂರಾದ 3 ಕೊಠಡಿಗಳಲ್ಲಿ ಒಂದು ಕೊಠಡಿಯ ನಿರ್ಮಾಣ ಪೂರ್ಣಗೊಂಡಿದ್ದು ಮತ್ತೊಂದು ಕೊಠಡಿಯ ನಿರ್ಮಾಣ ಛಾವಣಿ ಹಂತದಲ್ಲಿರುತ್ತದೆ. ಆದಾಗ್ಯೂ ಶಾಲೆಯು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಒಂದು ಕೊಠಡಿಯಲ್ಲಿ ಹಾಗೂ ಖಾಸಗಿ ಕಟ್ಟಡದಲ್ಲಿ ನಡೆಸಲಾಗುತ್ತದೆ.

ಶ್ರೀ ಟಿ.ಬಿ.ಜಯಚಂದ್ರ (ಶ್ರೀ ಎಸ್.ಪಿ.ಮುದ್ದಹನುಮೇಗೌಡ ಪರವಾಗಿ):- ಸಭಾಧ್ಯಕ್ಷರೇ, ತೆರೇದಕುಪ್ಪದಲ್ಲಿ ಇನ್ನೂ ಪ್ರಾಥಮಿಕ ಶಾಲೆಯಲ್ಲಿ, ಸರ್ಕಾರಿ ಪ್ರೌಢಶಾಲೆಯೂ ನಡೆಯುತ್ತಿದೆ ಎಂದು ಉತ್ತರ ಕೊಟ್ಟಿದ್ದಾರೆ. ಕೆಂಪನಹಳ್ಳಿಯಲ್ಲಿ ಏನಾಗಿದೆ ಎಂದರೆ, ಕಟ್ಟಡ ನಿರ್ಮಾಣದ ಹಂತದಲ್ಲಿದೆ ಪರಿಪೂರ್ಣವಾಗುತ್ತದೆ ಎನ್ನುವ

ಮಾತನ್ನು ಹೇಳಿದ್ದಾರೆ. ಇನ್ನೊಂದು ಕಡೆ ಚಾವಣಿ ಹಾಕುತ್ತೇವೆಂಬ ಮಾತನ್ನು ಕೂಡ ಹೇಳಿದ್ದಾರೆ. ಆದರೆ, ಒಂದು ಪ್ರಶ್ನೆ ಬಂದಿರುವುದು, 1995-96ನೇ ಸಾಲಿನಲ್ಲಿ ಕಟ್ಟಡಗಳು ಪ್ರಾರಂಭವಾಗಿದ್ದರೂ ಸಹಿತ ಇಲ್ಲಿಯವರೆಗೂ ಮುಗಿಯದಿರುವುದಕ್ಕೆ ಕಾರಣವೇನೆಂದರೆ, ಈ ಶಾಲಾ ಕಟ್ಟಡಗಳಿಗೆ ನೀವು ಹಣ ಎಷ್ಟು ಕೊಟ್ಟಿದ್ದೀರಿ? ಇದು ಮುಖ್ಯವಾಗಿರತಕ್ಕಂಥಾದ್ದು. ನೀವು ಹಣ ಎಷ್ಟು ಎಂದು ಹೇಳಿದರೆ, ಮುಂದಿನ ಪ್ರಶ್ನೆ ಕೇಳುತ್ತೇನೆ.

ಶ್ರೀ ಹೆಚ್.ಸಿ.ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೇ, 1995-96ನೇ ಸಾಲಿನಲ್ಲಿ ಸಾಮಾನ್ಯವಾಗಿ ಒಂದು ಕೊಠಡಿಗೆ 25ಸಾವಿರ ರೂಪಾಯಿ ಕೊಡತಕ್ಕ ವ್ಯವಸ್ಥೆ ಇತ್ತು. ಕೊನೆಗೆ ಹಣ ಬಹಳ ಕಡಿಮೆಯಾಗುತ್ತದೆಂದು, ನಾನು ಅನೇಕ ಕಡೆ ಹೋಗಿ ನೋಡಿದಾಗ, ಮತ್ತು ಶಾಸಕರುಗಳು ಬಂದು ಹೇಳಿದಾಗ, ಈ 25 ಸಾವಿರದಿಂದ 40 ಸಾವಿರ ರೂ.ಗಳಿಗೆ ಹೆಚ್ಚಿಸಿದ್ದು ಇದು ಸರ್ಕಾರದ ವತಿಯಿಂದ ಕೊಡತಕ್ಕ ಸೌಲಭ್ಯ. ಉಳಿದ ಹಣವನ್ನು ಜಿಲ್ಲಾ ಪಂಚಾಯಿತಿಯವರು, ತಾಲ್ಲೂಕು ಪಂಚಾಯಿತಿಯವರು ಲಭ್ಯವಾಗತಕ್ಕಂಥ, ಸಾರ್ವಜನಿಕರಿಂದ ತಪ್ಪಿದರೆ ಸೆಂಟ್ರಲ್ ಗವರ್ನಮೆಂಟ್‌ನಿಂದ ಬರತಕ್ಕ ಇ.ಎ.ಎಸ್. ಅಥವಾ ಜೆ.ಆರ್.ವೈ.ನಲ್ಲಿ ಹಣ ಒದಗಿಸಿ, 65 ಸಾವಿರ ರೂ.ಗಳಿಗೆ ಕಟ್ಟಡಗಳನ್ನು ಒದಗಿಸತಕ್ಕ ವ್ಯವಸ್ಥೆ ಕೆಲವು ಕಡೆಗಳಲ್ಲಿ ಆಗಿದೆ. ಕೆಲವು ಕಡೆ ಮುಂದೆ ಬಂದಿಲ್ಲ, ಕೆಲವು ಕಡೆ ಆಗಿಲ್ಲ. ಆದರೂ ಸಹ ಸರ್ಕಾರದ ವತಿಯಿಂದ ಕೊಡತಕ್ಕ ಹಣ, ಯಾವುದೇ ರೀತಿಯಲ್ಲಿಯೂ ಕಡಿಮೆಯಾಗದ ಹಾಗೆ, 40 ಸಾವಿರ ರೂಪಾಯಿ ಒಂದು ಕೊಠಡಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇನೆ. ಅದೇ ರೀತಿ ಈ ಹಣವನ್ನು ಜಿಲ್ಲಾ ಪಂಚಾಯಿತಿಗಳಿಗೆ ಒದಗಿಸಿ, ಜಿಲ್ಲಾ ಪಂಚಾಯಿತಿಗಳ ಮುಖಾಂತರ ಕಟ್ಟಡಗಳನ್ನು ಕಟ್ಟಿಸತಕ್ಕಂಥ ವ್ಯವಸ್ಥೆ ಆಗಿರುವಂತಾದ್ದು. ತಾವು ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರ, ಸಂಬಂಧಪಟ್ಟವರಿಗೆ ಕೊಟ್ಟಿದ್ದೇವೆ. ತಮ್ಮ ಅನುಮಾನ ಏನಿದೆ, ಅದನ್ನು ಕೇಳಿದರೆ ನಾನು ಉತ್ತರ ಹೇಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ:- ನನಗೆ ಅನುಮಾನ ಇರತಕ್ಕಂಥಾದ್ದು, ನೀವು ಕೊಡತಕ್ಕ 40 ಸಾವಿರ ರೂಪಾಯಿಗಳೇನಿದೆ, ಅದರಲ್ಲಿ ಕಟ್ಟಡಗಳನ್ನು ಮುಗಿಸುವುದಕ್ಕಾಗುವುದಿಲ್ಲ. ಇನ್ನು ಬಾಕಿ ಹಣ ಏನಿದೆ, 65 ಸಾವಿರ ಅಂದಾಜು ವೆಚ್ಚ ಇರತಕ್ಕಂತಾದ್ದು. ಇನ್ನು 25 ಸಾವಿರ ರೂಪಾಯಿಗಳನ್ನು ಸಾರ್ವಜನಿಕ ವಂತಿಕೆಯಿಂದ ಕಲೆಕ್ಟ್ ಮಾಡಬೇಕೆಂಬ ನಿರ್ದೇಶನ ಕೊಟ್ಟಿದ್ದೀರಿ. ಸಾರ್ವಜನಿಕರು ಹಣ ಕೊಟ್ಟಿಲ್ಲ, ಆ ಕಟ್ಟಡ ಮುಗಿಯುತ್ತಾ ಇಲ್ಲ. ಈ ಪರಿಸ್ಥಿತಿ ಇರುವುದರಿಂದ, ತಾಲ್ಲೂಕು ಪಂಚಾಯಿತಿಯವರಿಗೆ ಅಥವಾ ಜಿಲ್ಲಾ ಪಂಚಾಯಿತಿಯವರಿಗೆ ಈ ಹಣವನ್ನು ಭರಿಸಬೇಕೆಂದು ಹೇಳಿ. ಸಾರ್ವಜನಿಕರಿಂದ ಕಲೆಕ್ಟ್ ಮಾಡುವುದು ಸಾಧ್ಯವಿಲ್ಲ. ಅದಕ್ಕೋಸ್ಕರ, ಸರ್ಕಾರದಿಂದಲೇ ಒಂದು ನಿರ್ದೇಶನ ಕೊಟ್ಟು, ಸರ್ಕಾರದಿಂದ 40 ಸಾವಿರ ರೂಪಾಯಿ ಕೊಡುತ್ತೇವೆ. ಇನ್ನು ಅಂದಾಜು ವೆಚ್ಚದಲ್ಲಿ ವ್ಯತ್ಯಾಸದ ಹಣವನ್ನು ನೀವೇ ತುಂಬಿ ಎನ್ನತಕ್ಕ ನಿರ್ದೇಶನ ಕೊಟ್ಟರೆ,

ತಾನೇತಾನಾಗಿ ಆಕ್ಷನ್ ಪ್ಲಾನ್‌ನಲ್ಲಿ ಬರುತ್ತದೆ, ಮಂಜೂರಾಗುತ್ತದೆ ಮತ್ತು ಕಟ್ಟಡ ನಿಲ್ಲುವುದಕ್ಕೆ ಸಾಧ್ಯವಿಲ್ಲ. ಸಾರ್ವಜನಿಕ ವಂತಿಕೆಯಿಂದ ಮಾಡಬೇಕೆಂದು ಹೊರಟ ಸಂದರ್ಭದಲ್ಲಿ, ಆ ಹಣ ಕಲೆಕ್ಟ್ ಆಗುವುದಿಲ್ಲ, ಕಟ್ಟಡ ಮುಗಿಯುವುದಿಲ್ಲ. ಹೀಗಾಗಿ 8-10 ವರ್ಷಗಳಾದರೂ ಕಟ್ಟಡಗಳು ಮುಗಿಯದಿರತಕ್ಕ ಪರಿಸ್ಥಿತಿ ಇದೆ. ದಯಮಾಡಿ, 1995-96ನೇ ಸಾಲಿನಲ್ಲಿ ನೀವು ಕೊಟ್ಟಿದ್ದೀರಿ. ಇದುವರೆಗೂ ಪ್ರಾರಂಭದ ಹಂತದಲ್ಲಿವೆಯೇ ವಿನಹ ಮುಗಿಯತಕ್ಕ ಹಂತದಲ್ಲಿ ಇಲ್ಲ. ಕಂಟ್ರಾಕ್ಟರ್ ಕೆಲಸ ಮಾಡಿದ್ದಾರೆ, ಪೂರ್ತಿ ಮುಗಿಸುವುದಕ್ಕೆ, ದುಡ್ಡು ಕೊಡುವುದಕ್ಕೆ ಹಣ ಇಲ್ಲ. ವಿವಾದ ಬಂದಿರುವುದು ಇದು. ಈ ವ್ಯತ್ಯಾಸದ ಹಣವನ್ನು ಯಾರು ಭರಿಸಬೇಕು? ಜಿಲ್ಲಾ ಪಂಚಾಯಿತಿಯವರು ತಯಾರಿಲ್ಲ, ತಾಲ್ಲೂಕು ಪಂಚಾಯಿತಿಯವರು ತಯಾರಿಲ್ಲ. ಸಾರ್ವಜನಿಕರಿಂದ ನಮಗೆ ಹಣ ಬರುತ್ತಾ ಇಲ್ಲ. ಅಂತಹ ಸಂದರ್ಭದಲ್ಲಿ ಏನು ಮಾಡುತ್ತೀರೆಂಬುದನ್ನು ದಯವಿಟ್ಟು ಹೇಳಬೇಕು.

ಶ್ರೀ ಹೆಚ್.ಸಿ.ಗೋವಿಂದೇಗೌಡ:- 40 ಸಾವಿರ ರೂಪಾಯಿ ಸರ್ಕಾರದ ವತಿಯಿಂದ ಕೊಡುತ್ತಿದ್ದೇವೆ. ಬಾಕಿ ಇರತಕ್ಕ ಹಣವನ್ನು ಕೇಂದ್ರದಿಂದ ಬರತಕ್ಕ ಜೆ.ಆರ್.ವೈ. ಮತ್ತು ಇ.ಎ.ಎಸ್. ಫಂಡ್‌ನಿಂದ ಒದಗಿಸಿ, 65 ಸಾವಿರ ರೂಪಾಯಿಗಳನ್ನು ಹಾಕಿ, ಜಿಲ್ಲಾ ಪಂಚಾಯಿತಿಯವರೇ ಕಟ್ಟಿಸಬೇಕೆಂದು ನಾವು ಆದೇಶ ಕೊಟ್ಟಿದ್ದೇವೆ. ಕೆಲವು ಕಡೆ ಸಾರ್ವಜನಿಕರು ಮುಂದೆ ಬಂದು ಕಟ್ಟಿಸಿದ್ದಾರೆ. ಸಾರ್ವಜನಿಕರು ಮುಂದೆ ಬಾರದೇ ಇರತಕ್ಕಂಥ ಸಂದರ್ಭದಲ್ಲಿ, ಜೆ.ಆರ್.ವೈ ಮತ್ತು ಇ.ಎ.ಎಸ್.ನಲ್ಲಿ ಕೇಂದ್ರಸರ್ಕಾರದಿಂದ ಬರತಕ್ಕ ಹಣದ ಮೊತ್ತವನ್ನು ತೆಗೆದುಕೊಂಡು, ಕಟ್ಟಿಸತಕ್ಕ ವ್ಯವಸ್ಥೆ ಮಾಡಬೇಕೆಂದು ಆದೇಶ ಕಳುಹಿಸಿದ್ದೇವೆ. ಕೆಲವು ಜಿಲ್ಲಾ ಪಂಚಾಯಿತಿಯವರು ಈ ಕೆಲಸಗಳನ್ನು ಮಾಡಿದ್ದಾರೆ. ಕೆಲವು ಜಿಲ್ಲಾ ಪಂಚಾಯಿತಿಗಳಲ್ಲಿ ಈ ರೀತಿ ಕೆಲಸ ನಡೆದಿಲ್ಲ. ಇದಕ್ಕೆ ನಾವೀಗಾಗಲೇ ಸಮೀಕ್ಷೆ ಮಾಡುತ್ತಿದ್ದೇವೆ. ಸಮೀಕ್ಷೆ ಬರುವುದಕ್ಕಿಂತಲೂ, ದಯವಿಟ್ಟು ನಾನು ಶಾಸಕರಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತಿದ್ದೇನೆ. ತಾವೆಲ್ಲರೂ ಜಿಲ್ಲಾ ಪಂಚಾಯಿತಿ ಮೀಟಿಂಗ್‌ಗಳಿಗೆ ಹೋಗುತ್ತಿದ್ದೀರಿ. ಇದು ಮುಖ್ಯವಾಗಿ ಆಗಬೇಕಾಗಿರುವುದು. ಈ ಶಿಕ್ಷಣ ಇಲಾಖೆ ಬಗ್ಗೆ ಪಕ್ಷಾತೀತವಾಗಿ ನಾವೆಲ್ಲರೂ ಸೇರಿ ಈ ದೇಶದಲ್ಲಿ ಕೆಲಸ ಮಾಡಬೇಕೆಂದರೆ, ಈ ಶಿಕ್ಷಣ ಇಲಾಖೆಯಲ್ಲಿ ಉತ್ತಮವಾದಂಥ ಕೆಲಸ ಆಗಬೇಕು. ಉಪಾಧ್ಯಾಯರುಗಳು ಸಂಖ್ಯೆ ಜಾಸ್ತಿಯಾಗಬೇಕು. ಕಟ್ಟಡಗಳು ಅವಶ್ಯಕತೆ ಇರತಕ್ಕ ಪ್ರದೇಶಗಳಲ್ಲಿ, ಕಟ್ಟಡಗಳನ್ನು ಕಟ್ಟಿಸಬೇಕು. ಹೆಚ್ಚು ಕಟ್ಟಡಗಳನ್ನು ಕಟ್ಟಿಸಬೇಕೆಂದು ಸರ್ಕಾರದ ವತಿಯಿಂದ 40 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಸಾರ್ವಜನಿಕ ವಂತಿಗೆ ವಿಚಾರದಲ್ಲಿ ಮುಂದೆ ಬರದೇ ಇರುವುದರಿಂದ ಅನೇಕ ಕಡೆ ಕಟ್ಟಡಗಳು ಆಗುತ್ತಾ ಇಲ್ಲ. ದಯವಿಟ್ಟು ಶಾಸಕರುಗಳಾದ ತಾವು ಜಿಲ್ಲಾ ಪಂಚಾಯಿತಿಗಳ ಸಭೆಗಳಲ್ಲಿ ಈ ಬಗ್ಗೆ ಹೆಚ್ಚು ಒತ್ತಡ ಕೊಟ್ಟು ಜೆ.ಆರ್.ವೈ ಮತ್ತು ಇ.ಎ.ಎಸ್.ನಲ್ಲಿ ಬರತಕ್ಕ ಹಣದಲ್ಲಿ ಹೆಚ್ಚು ಭಾಗವನ್ನು ಇದಕ್ಕೆ ಒದಗಿಸಿದರೆ, ಬಹುಶಃ ಹೆಚ್ಚಿನ ರೀತಿಯಲ್ಲಿ ಕಟ್ಟಡ ಕಟ್ಟಿಸುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಕೆಲವು ಕಡೆ ಸಾರ್ವಜನಿಕರೂ

ಕೊಡುತ್ತಿದ್ದಾರೆ. ಅವರಿಗೆ ನಾನು ಈ ಮೂಲಕ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಬೆಂಗಳೂರು ಉತ್ತರದಲ್ಲಿ ಮುನಿಯಪ್ಪ ಎಂದು ಅಧ್ಯಕ್ಷರು ಇದ್ದಾರೆ. ಅವರು ಈ ವರ್ಷ ಒಂದು ನೂರು ಕಟ್ಟಡಗಳನ್ನು ಕಟ್ಟಿಸತಕ್ಕ ವ್ಯವಸ್ಥೆ ಮಾಡಿದ್ದಾರೆ. ನಾವು ಕೊಡತಕ್ಕ ಹಣದ ಜೊತೆಗೆ, ಅವರು ಹಾಕಿ ಕಟ್ಟಿಸುತ್ತಿದ್ದಾರೆ. ಅವರಿಗೆ ಹೆಚ್ಚು ಹಣ ಬರುವುದರಿಂದ 100 ಕಟ್ಟಡಗಳನ್ನು ಪ್ರಾಥಮಿಕ ಶಾಲೆಗೆ ಕಟ್ಟಿಸಿಕೊಡುತ್ತೇವೆಂದು ಮುಂದೆ ಬಂದಿದ್ದಾರೆ. ಈಗಾಗಲೇ 30-40 ಕಟ್ಟಡಗಳು ಆಗಿದೆ. 5-6 ಕಟ್ಟಡಗಳು ಪ್ರಾರಂಭೋತ್ಸವವೂ ಆಗಿದೆ. ದಯವಿಟ್ಟು ಇದೆಲ್ಲವೂ ನಮ್ಮದೇ ಎಂದು ಭಾವಿಸಿಕೊಳ್ಳಬೇಕು. ಈ ರಾಜ್ಯದಲ್ಲಿ ಮೊದಲು ಏನಾದರೂ ಪ್ರಾತಿನಿಧ್ಯ ಕೊಡಬೇಕೆಂದರೆ, ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಒತ್ತುಕೊಡಬೇಕಾಗುತ್ತದೆ. ಸಾರ್ವಜನಿಕರಿಂದ ಬರತಕ್ಕ ಹಣವನ್ನೂ ಉಪಯೋಗಿಸಿಕೊಂಡು, ಈ ಕಟ್ಟಡಗಳನ್ನು ಕಟ್ಟುವುದಕ್ಕೆ ನಾವೆಲ್ಲರೂ ಒಟ್ಟು ಸೇರಿ ಮಾಡೋಣವೆಂದು ಈ ಸಂದರ್ಭದಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಮಾನ್ಯ ಸಚಿವರ ಕಾಳಜಿ, ಕಳಕಳಿ ಸ್ವಾಗತಾರ್ಹ.....

ಅಧ್ಯಕ್ಷರು:- ತಮ್ಮ ಪ್ರಶ್ನೆ ಕೇಳಿ. ಇದು ಬೇಡ. ಒಂದೇ ಪ್ರಶ್ನೆ ಸುಮಾರು 7 ನಿಮಿಷ ಆಗಿದೆ. ಒಂದು ಗಂಟೆಯೊಳಗೆ ಪ್ರಶ್ನೋತ್ತರ ಮುಗಿಸಬೇಕು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ನಾನು ಹೋದಸಾರಿ ಒಂದು ಸಲಹೆ ಕೊಟ್ಟಿದ್ದೆ. ಅದು ಇನ್ನೂ ಅನುಷ್ಠಾನಕ್ಕೆ ಬರಲಿಲ್ಲ. ಹೆಂಚಿನ ಮನೆ ಕಟ್ಟಡಕ್ಕೆ ನೀವು ಎಷ್ಟು ಹಣ ಕೊಟ್ಟಿದ್ದೀರಿ. ಅದರ ರಿಪೇರಿಗೂ ಅಷ್ಟೇ ಹಣ ಕೊಡತಕ್ಕ ಪರಿಸ್ಥಿತಿ ಇದೆ. ಮಂಡ್ಯ ಜಿಲ್ಲೆಯ ಉದಾಹರಣೆ ಕೊಡುವುದಾದರೆ, ಕನಿಷ್ಟ 500 ಶಾಲಾ ಕೊಠಡಿಗಳನ್ನು ಕೊಟ್ಟಿದ್ದೀರಿ. ನೀವು ನಾನ್ನೂರೇ ಕೊಡಿ ಸಾಕು. ಆರ್.ಸಿ.ಸಿ.ಯ 2-3 ಅಂತಸ್ತು ಇರತಕ್ಕ ಕಟ್ಟಡಗಳನ್ನು ಕಟ್ಟುವಂಥ ವ್ಯವಸ್ಥೆ ಮಾಡದೇ ಹೋದರೆ, ಬಹಳ ಹಳ್ಳಿಗಳಲ್ಲಿ ನೂರಕ್ಕೆ 80 ಭಾಗ ಸ್ಥಳ ಇಲ್ಲ. ಆದ್ದರಿಂದ, ದಯವಿಟ್ಟು ಪುನರ್ ಪರಿಶೀಲನೆ ಮಾಡಿ, ಆರ್.ಸಿ.ಸಿ. ಕಟ್ಟಡ ಕಟ್ಟುವ ವ್ಯವಸ್ಥೆ ಮಾಡಬೇಕು.

ಶ್ರೀ ಹೆಚ್.ಸಿ.ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಸಾವಿರಾರು ಕೊಠಡಿಗಳ ಅವಶ್ಯಕತೆ ಇದೆ. ಕೆಲವು ಕಡೆ ಮಾತ್ರ ಕಟ್ಟಿಸುವುದಾದರೆ, ಮಾನ್ಯ ಸ್ನೇಹಿತರು ಏನು ಹೇಳಿದ್ದಾರೆ, ಆ ರೀತಿ ಕಟ್ಟಿಸುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು 65 ಸಾವಿರ ರೂಪಾಯಿನಲ್ಲಿ ಕಟ್ಟಡ ಕಟ್ಟಿಸುವುದಾದರೂ, ಒಂದು ವರ್ಷಕ್ಕೆ 10-12 ಸಾವಿರ ಶಾಲಾ ಕೊಠಡಿಗಳನ್ನು ಕಟ್ಟಿಸಿದರೂ ಪೂರ್ಣವಾಗತಕ್ಕ ಪರಿಸ್ಥಿತಿಯಲ್ಲಿ ಇಲ್ಲ. ಹಾಗಿರುವಾಗ, ಯಾವುದಾದರೊಂದು ಪ್ರದೇಶದಲ್ಲಿ ಆರ್.ಸಿ.ಸಿ. ಕಟ್ಟಡಗಳನ್ನು ಕಟ್ಟಿಸಿ, ಆ ಮುಖಾಂತರ 1-2 ಅಂತಸ್ತುಗಳನ್ನು ಕಟ್ಟಿಸುವುದಕ್ಕೆ ಹೋದರೆ, ಬಹಳ ಅಂದಾಜು ಬೇಕಾಗುತ್ತದೆ. ಹಾಲಿ 65 ಸಾವಿರ ರೂಪಾಯಿ ಕಟ್ಟಡಕ್ಕೆ, ನಾವು 40 ಸಾವಿರ ರೂಪಾಯಿ ಕೊಡುತ್ತೇವೆಂದು ಹೇಳಿದರೂ ಕೂಡ ಸಾರ್ವಜನಿಕರು ಮುಂದೆ ಬರುತ್ತಾ ಇಲ್ಲ. ಆದ್ದರಿಂದ, ಈ ಸಮಸ್ಯೆ ಬಗೆಹರಿಸಬೇಕಾದರೆ, ನಾನು ಗ್ರಾಮೀಣ ಅಭಿವೃದ್ಧಿ ಮಂತ್ರಿಗಳ

ಹತ್ತಿರ, ನಿನ್ನೆ ದಿವಸ ಪ್ರಾರ್ಥನೆ ಮಾಡಿದ್ದೇನೆ. ದಯವಿಟ್ಟು ಇ.ಎ.ಎಸ್. ಮತ್ತು ಜೆ.ಆರ್.ವೈ.ನಲ್ಲಿ ಹೆಚ್ಚು ಹಣ ಒದಗಿಸಿ ಎಂದು ಕೇಳಿದ್ದೇನೆ. ಅವರು ಹಣ ಒದಗಿಸಿದಾಗ, ಬೃಹದಾಕಾರದಲ್ಲಿರತಕ್ಕಂತ ಈ ಸಮಸ್ಯೆಗಳು ಕಡಿಮೆಯಾಗುತ್ತದೆ.

ಶ್ರೀ ಎಂ.ಪಿ.ಪ್ರಕಾಶ್:- ಅವರಿಗೆ ಸಹಾಯವಾಗಲಿ ಎನ್ನುವುದಕ್ಕೆ, ನಮ್ಮ ಜಿಲ್ಲೆಯಲ್ಲೂ ಕೂಡ ಶೇಕಡ 80 ಜೆ.ಆರ್.ವೈ. ಅನುದಾನದಲ್ಲಿ, 20 ಸಾವಿರ ರೂಪಾಯಿ ಗ್ರಾಮ ಪಂಚಾಯಿತಿಯ ಮೂಲಕವಾಗಿ ಕೊಡತಕ್ಕಂತಾದ್ದು, ಶೇಕಡ 20ರ ಅನುದಾನದಲ್ಲಿ ಜಿಲ್ಲಾ ಪಂಚಾಯಿತಿಯವರು 20 ಸಾವಿರ, 40 ಸಾವಿರ ರೂಪಾಯಿ ಶಿಕ್ಷಣ ಇಲಾಖೆಯವರಿಗೆ ಕೊಡುತ್ತಿದ್ದೇವೆ. ಒಟ್ಟು 80-85 ಸಾವಿರ ರೂಪಾಯಿಗಳಿಗೆ ಆರ್.ಸಿ.ಸಿ. ಕಟ್ಟಡಕ್ಕೇ ವ್ಯವಸ್ಥೆ ಮಾಡಿದ್ದೇವೆ. ಆ ತರಹದಲ್ಲಿಯೂ ಕೂಡ ತಮ್ಮ ಕ್ಷೇತ್ರದಲ್ಲಿ ತಾವು ವ್ಯವಸ್ಥೆ ಮಾಡಬಹುದು.

ವಿಷಯ:- ರಾಜ್ಯದಲ್ಲಿ ವನ ನಿರ್ಮಾಣ ಕಾರ್ಯಕ್ರಮ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 124 (1106)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ):- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?.

ಅ) ರಾಜ್ಯದಲ್ಲಿ ಅರಣ್ಯ ಬೆಳೆಸಲು ಸರ್ಕಾರದವರು ಇದುವರೆವಿಗೆ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವರು?

ಆ) ಈಗ ರಾಜ್ಯದಲ್ಲಿ ಎಷ್ಟು ಎಕರೆ ಅರಣ್ಯ ಪ್ರದೇಶವಿದೆ ಮತ್ತು ಹೊಸದಾಗಿ ಎಷ್ಟು ಎಕರೆ ಅರಣ್ಯ ಬೆಳೆಯಲು ಉದ್ದೇಶಿಸಲಾಗಿದೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು):-

ಅ) ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ರಾಜ್ಯದ ಸರ್ಕಾರಿ : ಸಾರ್ವಜನಿಕ ಹಾಗೂ ಸಮುದಾಯ ಭೂಮಿಗಳಲ್ಲಿ ನೆಡುತೋಪುಗಳನ್ನು ಬೆಳೆಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ಸಾಗರೋತ್ತರ ಅಭಿವೃದ್ಧಿ ಆಡಳಿತದ ನೆರವಿನ ಪಶ್ಚಿಮಘಟ್ಟ ಅರಣ್ಯೀಕರಣ ಮತ್ತು ಪರಿಸರ ಯೋಜನೆ.
2. ಪ್ರದೇಶಾಧಾರಿತ ಉರುವಲು ಮತ್ತು ಮೇವು ಯೋಜನೆ.
3. ಸಾಮಾಜಿಕ ಅರಣ್ಯ ಯೋಜನೆ. (ರಾಜ್ಯ ವಲಯ)
4. ಕ್ಷೀಣಿತ ಅರಣ್ಯ ಅಭಿವೃದ್ಧಿ ಯೋಜನೆ.
5. ನಗರ ಪ್ರದೇಶಗಳ ಹಸರೀಕರಣ ಯೋಜನೆ.